ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)

ಬಿ.ಎನ್. ರಸ್ತೆ, ಮೈಸೂರು –570025

ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 23.02.2018

**ಪ್ರಕಟಣೆಯ ಕೃಪೆಗಾಗಿ**

**ದೃಶ್ಯ ಮಾಧ್ಯಮಗಳ ದುಷ್ಪರಿಣಾಮದಿಂದ ಸಾಹಿತ್ಯ ಕುಂಠಿತಗೊಳ್ಳುತ್ತಿದೆ**

– ಡಾ. ಸಿ.ಪಿ. ಕೃಷ್ಣಕುಮಾರ್

'ಇಂದು ಸಾಹಿತ್ಯವನ್ನು ಓದುವವರ, ಅಭ್ಯಾಸಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅದರಲ್ಲಿಯೂ ಹಳೆಗನ್ನಡವನ್ನು ಓದುವವರು ವಿರಳವಾಗುತ್ತಿದ್ದಾರೆ. ಅದಕ್ಕೆ ಕಾರಣ ಇಂದಿನ ದೃಶ್ಯ ಮಾಧ್ಯಮಗಳು. ದೃಶ್ಯ ಮಾಧ್ಯಮಗಳ ದುಷ್ಪ ಪ್ರಭಾವದಿಂದ ಸಾಹಿತ್ಯ ವಲಯ ನಲುಗುತ್ತಿದೆ' ಎಂದು ಖ್ಯಾತ ಸಾಹಿತಿಗಳಾದ ಡಾ. ಸಿ.ಪಿ. ಕೃಷ್ಣಕುಮಾರ್ ಅವರು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ – ಜಾಣೆಯರ ಬಳಗವು ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತರಕಾಲೇಜು ಪ್ರಬಂಧ ಮಂಡನೆ ಮತ್ತು ಸ್ವರಚಿತ ಕವನ ವಾಚನ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. 'ಕುವೆಂಪು ಅವರು ರನ್ನನಿರುವ ಕನ್ನಡಕ್ಕೆ ಅನ್ಯರಿಂದ ಬಹುದೆ ಧಕ್ಕೆ ಎಂದಿದ್ದಾರೆ. ರನ್ನ ಶಕ್ತ ಕವಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ರನ್ನನ ಮೇಲೆ ಪಂಪನ ಪ್ರಭಾವ ಬಹಳಷ್ಟಾಗಿದೆ. ಪಂಪನನ್ನು ಅನುಸರಿಸಿಯೂ ಆತ ಸೋಪಜ್ಞತೆಯನ್ನು ಮೆರೆದಿದ್ದಾನೆ. ಮತ್ತೊಬ್ಬ ಕವಿಗೆ ಋಣಿಯಾಗಿಯೂ ಸ್ವಂತಿಕೆ ಮೆರೆದವರಲ್ಲಿ ರನ್ನ ಅಗ್ರಗಣ್ಯ. ಅಂತೆಯೇ ಹರಿಹರನ ಪುಷ್ಪರಗಳೆಯಲ್ಲಿ ಸತ್ಯ, ಶಿವ, ಸೌಂದರ್ಯವಿದೆ. ಆತ ಕ್ರಾಂತಿಕಾರಕ ಕವಿ ಹೇಗೋ ಹಾಗೆಯೇ ಭಕ್ತ ಕವಿಯೂ ಆಗಿದ್ದಾನೆ. ಇವರಿಬ್ಬರ ಬಗ್ಗೆ ಪ್ರಬಂಧ ಮಂಡನೆಯಾಗುತ್ತಿರುವುದು, ಶ್ಲಾಘನೀಯವಾದುದು' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು 'ಪ್ರತಿಯೊಂದು ಉತ್ತಮ ಅಭಿವ್ಯಕ್ತಿಗೂ, ಪ್ರತಿಯೊಂದು ವಿಚಾರಕ್ಕೂ ತುಂಬಾ ಮೌಲ್ಯವಿದೆ. ನಾಲ್ಕು ಜನರ ಮುಂದೆ ಅಭಿಪ್ರಾಯವನ್ನು, ಭಾವದ ಅಭಿವ್ಯಕ್ತಿಯನ್ನು ನೀಡುವುದೇ ಒಂದು ಸುಸಂದರ್ಭ. ಆದ್ದರಿಂದ ಇಲ್ಲಿ ಬಂದಿರುವ ಎಲ್ಲಾ ಸ್ಪರ್ಧಿಗಳ ಅಭಿಪ್ರಾಯಗಳಿಗೂ ಅವರದೇ ಆದ ನೆಲೆಯಲ್ಲಿ ಮೌಲ್ಯವಿರುತ್ತದೆ. ನಿಮ್ಮ ಚಿಂತನೆ, ಬರಹ ಸಮಾಜಕ್ಕೆ ದಾರಿದೀಪವಾಗಲಿ. ಇಂದು ಸಾಹಿತ್ಯ, ಭಾಷೆ ಎಲ್ಲವೂ ಆಧುನಿಕವಾದ ವ್ಯವಹಾರದ ಜಗತ್ತಿನಲ್ಲಿ ಸ್ಪರ್ಧಿಸಬೇಕಾಗಿವೆ. ಕೇವಲ ಅಕ್ಷರಜ್ಞಾನವೊಂದೇ ಸಾಕ್ಷರತೆಯಲ್ಲ. ಮಾಧ್ಯಮ, ಮಾಹಿತಿ ಮತ್ತು ತಂತ್ರಜ್ಞಾನದ ಸಾಕ್ಷರತೆ ಅತೀ ಮುಖ್ಯವಾದುದು. ಇದು ಮಾತ್ರವೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ನೈಜ ಸಾಕ್ಷರತೆ ಎನಿಸಿಕೊಳ್ಳುತ್ತದೆ. ಇದು ಸ್ಪರ್ಧಾತ್ಮಕವಾದ ಜಗತ್ತು. ಅದಕ್ಕೆ ತಕ್ಕಂತೆ ಭಾಷೆ ಮತ್ತು ಸಾಹಿತ್ಯ ಕ್ಷೇತ್ರವೂ ಬದಲಾಗಬೇಕಿದೆ. ಹಿಂದೆ ರಾಜ ಮಹಾರಾಜರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಇಂದು ಸರ್ಕಾರಗಳು ಈ ದಿಸೆಯಲ್ಲಿ ಕೆಲಸ ಮಾಡಬೇಕಿದೆ' ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಭಾಗದ ಸಂಯೋಜಕರಾದ ಪ್ರೊ. ಎಚ್.ಟಿ. ಶೈಲಜಾರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತ ಕೋರಿದರು. ಶ್ರೀ ಎಚ್.ಎಂ. ಮಲ್ಲಿಕಾರ್ಜುನ ಪ್ರಾರ್ಥಿಸಿದರು. ಕು. ಎಂ. ಆಶಾ ವಂದಿಸಿದರು. ಕು. ಬಿ.ಎಸ್. ಸೌಮ್ಯ ನಿರೂಪಿಸಿದರು. ವಿಭಾಗದ ಅಧ್ಯಾಪಕರು, ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ಸ್ಪರ್ಧಿಗಳು, ಅಧ್ಯಾಪಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗೆ,
ಸಂಪಾದಕರು

_________________

_________________

ಪ್ರಾಂಶುಪಾಲರು

ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025